ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಕೃಷ್ಣ–ತುಂಗ ಆವರಣ, ಮಂತ್ರಾಲಯ ರಸ್ತೆ (ಎನ್.ಹೆಚ್. 167), ಯರಗೇರಾ–584133, ರಾಯಚೂರು, ಕರ್ನಾಟಕ
ಶೈಕ್ಷಣಿಕ ವಿಭಾಗ
E-mail: registrarrur@gmail.com Website: https://raichuruniversity.ac.in

ಕ್ರ.ಸಂ.ರಾವಿರಾ/ವಿದ್ಯಾಮಂಡಲ/2023–24/ 581 ದಿನಾಂಕ:20.09.2023

## ಸುತ್ತೋಲೆ

ವಿಷಯ : "ಬಾಪೂಜಿ ಪ್ರಬಂಧ ಸ್ಪರ್ಧೆ"ಗೆ ಪ್ರಬಂಧಗಳನ್ನು ಪದವಿ ಹಾಗೂ ಸ್ನಾತಕೋತ್ತರ ಪದವಿ ವಿಭಾಗಗಳಿಂದ ಸಂಗ್ರಹಿಸಿ ಕಳುಹಿಸುವ ಕುರಿತು.
ಉಲ್ಲೇಖ: 1. ಸಂ:ಹಿಸನಿ/ವಾ.ಮ.ಸಾ.ಸಂ.ಇ/ರಾ/ಪ್ರಸ್ಪರ್ಧೆ/2023–24 ದಿನಾಂಕ: 19.09.2023

****

ಈ ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಮಹಾತ್ಮ ಗಾಂಧೀಜಿಯವರ 154 ನೇ ಜಯಂತಿಯ ಅಂಗವಾಗಿ ಪದವಿ ಹಾಗೂ ಸ್ನಾತಕೋತ್ತರ ಪದವಿ ವಿಭಾಗಗಳಲ್ಲಿ ಜಿಲ್ಲಾ ಮತ್ತು ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಲಾಗಿರುತ್ತದೆ.

ಜಿಲ್ಲಾಮಟ್ಟದಲ್ಲಿ ಪ್ರತಿ ವಿಭಾಗಗಳಿಂದ ಆಯ್ಕೆಯಾಗುವ ಮೂರು ಅತ್ಯುತ್ತಮ ಪ್ರಬಂಧಗಳಿಗೆ ಜಿಲ್ಲಾ ಮಟ್ಟದಲ್ಲಿ "ಮಹಾತ್ಮ ಗಾಂಧೀಜಿ ಜಯಂತಿ" ಸಮಾರಂಭದಲ್ಲಿ ಪ್ರಶಸಿಯನ್ನು ನೀಡುವುದರ ಜತೆಗೆ ಆ ಪ್ರಬಂಧಗಳನ್ನು ರಾಜ್ಯಮಟ್ಟದ ಸ್ಪರ್ಧೆಗೆ ಕೂಡ ಕಳುಹಿಸಲಾಗುತ್ತದೆ.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದ ಸಮಿತಿಯಲ್ಲಿ ಪ್ರಬಂಧಗಳನ್ನು ಆಯ್ಕೆ ಮಾಡಲಿದೆ. ಪ್ರಬಂಧ ಸ್ಪರ್ಧೆಯ ವಿಷಯ, ಆಯ್ಕೆ ವಿಧಾನ, ಪ್ರಬಂಧ ರಚನೆ ಮಾರ್ಗಸೂಚಿ ಹಾಗೂ ಬಹುಮಾನಗಳ ಕುರಿತು ವಿವರವಾದ ಮಾಹಿತಿಯನ್ನು ಪ್ರತ್ಯೇಕವಾಗಿ ಈ ಪತ್ರದ ಜತೆ ಲಗತ್ತಿಸಲಾಗಿದೆ.

**ಪದವಿ ಹಾಗೂ ಸ್ನಾತಕೋತ್ತರ ಪದವಿ ವಿಭಾಗ:**

1. ದೇಶ ನಿರ್ಮಾಣದಲ್ಲಿ ಗಾಂಧೀಜಿಯವರ ಜಾತ್ಯಾತೀತ ನಿಲುವುಗಳು.
2. ಗಾಂಧೀಜಿಯವರ ಧಾರ್ಮಿಕ ಸಂಹಿಷ್ಣುತೆ ಚಿಂತನೆ, ಸ್ವಾತಂತ್ರ್ಯ ಮತ್ತು ಸಮಾನತೆಯ ಪರಿಕಲ್ಪನೆಗಳು.
3. ನನ್ನ ಬದುಕಿನಲ್ಲಿ ಗಾಂಧೀಜಿ ತತ್ವಗಳನ್ನು ಅಳವಡಿಸಿಕೊಳ್ಳುವ ಬಗೆ.
4. ಗಾಂಧೀಜಿಯವರು ಕಂಡ ಸ್ವರಾಜ್ಯ ಮತ್ತು ಆರ್ಥಿಕ ಚಿಂತನೆಗಳು.

–ಪದವಿ ಹಾಗೂ ಸ್ನಾತಕೋತ್ತರ ಪದವಿ ವಿಭಾಗದ ವಿದ್ಯಾರ್ಥಿಗಳು ಈ 4 ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯ ಕುರಿತು ಸುಮಾರು 2000 ಪದಗಳಿಗೆ ಮೀರದಂತೆ ಪ್ರಬಂಧಗಳನ್ನು ರಚಿಸಬೇಕು.

**ಬಹುಮಾನಗಳ ವಿವಿರ:**

ಪದವಿ ಕಾಲೇಜು ಹಾಗೂ ಸ್ನಾತಕೋತ್ತರ ವಿಭಾಗಗಳ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ

- ಜಿಲ್ಲಾ ಮಟ್ಟದಲ್ಲಿ– ಪ್ರಥಮ ಸ್ಥಾನಕ್ಕೆ ರೂ.3000/–
  ದ್ವಿತೀಯ ಸ್ಥಾನಕ್ಕೆ ರೂ.2000/–
  ತೃತೀಯ ಸ್ಥಾನಕ್ಕೆ ರೂ.1000/–
- ರಾಜ್ಯಮಟ್ಟದಲ್ಲಿ– ಪ್ರಥಮ ಸ್ಥಾನಕ್ಕೆ ರೂ.31,000/–
  ದ್ವಿತೀಯ ಸ್ಥಾನಕ್ಕೆ ರೂ.21,000/–
  ತೃತೀಯ ಸ್ಥಾನಕ್ಕೆ ರೂ.11,000/–

ಪ್ರಬಂಧ ರಚಿಸಲು ಮಾರ್ಗಸೂಚಿಗಳು:

- ಪ್ರಬಂಧವು ಸಂಪೂರ್ಣವಾಗಿ ಸ್ವರಚಿತವಾಗಿರಬೇಕು
- ಶುದ್ಧ ಕೈಬರಹ ಅಥವಾ ನುಡಿ ಇಲ್ಲವೇ ಯುನಿಕೋಡ್ ತಂತ್ರಾಂಶದಲ್ಲಿ ಬೆರಳಚ್ಚು ಮಾಡಿರಬೇಕು
- ಆಕರವಾಗಿ ಬಳಸಿದ ಪರಾಮರ್ಶನ/ ಆಧಾರ ಗ್ರಂಥಗಳ ವಿವರಗಳನ್ನು ಪ್ರಬಂಧ ಕೊನೆಯಲ್ಲಿ ನಮೂದಿಸಬೇಕು.
- ಪ್ರಬಂಧಕಾರರ ಹೆಸರು, ವಿಳಾಸ ನಮೂದಿಸಿರಬೇಕು.
- ಶಾಲಾ/ ಕಾಲೇಜುಗಳು ಹಾಗೂ ಸಂಬಂಧಿಸಿದ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳ ಮೂಲಕವೇ ಜಿಲ್ಲಾ ವಾರ್ತಾಧಿಕಾರಿಗಳಿಗೆ ಪ್ರಬಂಧಗಳನ್ನು ತಲುಪಿಸಬೇಕು.
- ಪ್ರಬಂಧವು ಈ ಮೊದಲು ಎಲ್ಲಿಯೂ ಪ್ರಕಟವಾಗಿರಬಾರದು.
- ಆಯ್ಕೆ ಪ್ರಬಂಧಗಳ ಪ್ರಕಟಣೆಯ ಹಕ್ಕನ್ನು ವಾತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹೊಂದಿರುತ್ತದೆ.

ವಿದ್ಯಾರ್ಥಿಗಳು ರಚಿಸಿದ ಪ್ರಬಂಧಗಳನ್ನು ರಾಯಚೂರು ಜಿಲ್ಲಾ ವ್ಯಾಪ್ತಿಯ ಪದವಿ ಕಾಲೇಜುಗಳ ಪ್ರಾಚಾರ್ಯರ ಮತ್ತು ವಿದ್ಯಾರ್ಥಿ ನಿಲಯದ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರ ಮೂಲಕ ದಿನಾಂಕ: 26.09.2023 ರ ಒಳಗಾಗಿ ಹಿರಿಯ ಸಹಾಯಕ ನಿರ್ದೇಶಕರ ಕಚೇರಿ, 1ನೇ ಮಹಡಿ, ಪತ್ರಿಕಾ ಭವನ, ರಂಗಮಂದಿರ ಹಿಂಭಾಗ, ರಾಯಚೂರು-584101 ಈ ವಿಳಾಸಕ್ಕೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ-9886068357, 9480841242, ಸಂಪರ್ಕಿಸಬಹುದು.

ಸಮಯಾವಕಾಶ ಕಡಿಮೆ ಇರುವುದರಿಂದ ಎಲ್ಲಾ ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ತಿಳಿಸಿ ಸೂಚನಾ ಫಲಕದಲ್ಲಿ ಈ ಸುತ್ತೋಲೆಯನ್ನು ಲಗತ್ತಿಸುವ ಮೂಲಕ ನಿಗದಿತ ಅವಧಿಯಲ್ಲಿ ಪ್ರಬಂಧಗಳನ್ನು ಕಳಹಿಸಿಕೊಡಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕೇಂದು ಎಂದು ಈ ಮೂಲಕ ತಿಳಿಸಲಾಗಿದೆ.

20/9/23

(ಪ್ರೊ. ವಿಶ್ವನಾಥ.ಎಂ)
ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ ರಾಯಚೂರು,

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು.

ಪ್ರತಿಗಳು:

1. ಆಪ್ತ ಕಾರ್ಯದರ್ಶಿ/ಆಪ್ತಸಹಾಯಕರು ಕುಲಪತಿಗಳು ರಾಯಚೂರು ವಿಶ್ವವಿದ್ಯಾಲಯ ರಾಯಚೂರು.
2. ಆಪ್ತ ಸಹಾಯಕರು ಕುಲಸಚಿವರು (ಮೌಲ್ಯಮಾಪನ) ರಾಯಚೂರು ವಿಶ್ವವಿದ್ಯಾಲಯ ರಾಯಚೂರು
3. ಉಪ ಕುಲಸಚಿವರು ರಾಯಚೂರು ವಿಶ್ವವಿದ್ಯಾಲಯ ರಾಯಚೂರು
4. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
5. ಹಣಕಾಸು ಅಧಿಕಾರಿಗಳು ರಾಯಚೂರು ವಿಶ್ವವಿದ್ಯಾಲಯ ರಾಯಚೂರು
6. ಕಛೇರಿ ಪ್ರತಿ